ಹೋಗಿರುವ ಈ ಹರಿಜನ ಬಸ್ತಿಗಳು ಮತ್ತು ಹ್ಯಾಮ್ಲೆಟ್ ಗ್ರಾಮಗಳು ಏನಿವೆ, ಇವುಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ:- ಅಧ್ಯಕ್ಷರೇ, ಇವತ್ತು ಮೋಟಮ್ಮನವರು ಹೇಳಿದಹಾಗೆ ಅವುಗಳಿಗೆ ವಿದ್ಯುತ್ ಕೊಡಬೇಕಾದರೆ ಹಣ ನಮಗೆ ಎಷ್ಟು ಕೊಟ್ಟರೆ ನಾವು ಅಷ್ಟು ಮಾಡುವವರು. ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಏನಾದರೂ ಫಂಡ್ಸ್ ಕೊಡಿಸಿದರೆ ನಾವು ಮಾಡಿಸುತ್ತೇವೆ ಎಂದು ಅವರಿಗೆ ಹೇಳುತ್ತೇನೆ.

ಶ್ರೀಮತಿ ಮೋಟಮ್ಮ:- ಇಂದೊಂದು ತರಹ ವಿಚಿತ್ರವಾಗಿದೆ. ನಾನು ಎಲ್ಲಿಂದ ಹಣ ಕೊಡಿಸುವುದು? ತಾವು ಮುಖ್ಯಮಂತ್ರಿಗಳನ್ನು ಕೇಳಿ. ಅವರೂ ಕೂಡ ಮಲೆನಾಡು ಪ್ರಾಂತ್ಯದಿಂದಲೇ ಬಂದವರು. ಮುಖ್ಯಮಂತ್ರಿಗಳನ್ನು ಕೇಳಿದರೆ ಒಳ್ಳೆಯದಾಗುತ್ತದೆ. ಅವರಲ್ಲೂ ಹ್ಯಾಮ್ಲೆಟ್ ಗ್ರಾಮಗಳು ಹರಿಜನ ಬಸ್ತಿಗಳು ಉಳಿದು ಹೋಗಿದೆ. ದಯವಿಟ್ಟು ಇಲ್ಲಿಗೆ ಒಂದು ಹೊಸ ಸಬ್‌ಡಿವಿಜನ್ ಓಪನ್ ಮಾಡುವುದಕ್ಕೆ ಅವರ ಹತ್ತಿರ ಹಣ ಪಡೆದು ಇದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ಎಂದು ದಯವಿಟ್ಟು ಕೇಳಿ ಈ ಕೆಲಸ ಪ್ರಾರಂಭ ಮಾಡಿ.

ಶ್ರೀ ಎಂ. ರಾಮಪ್ಪ:- ಕಾರ್ಯಕ್ರಮ ಅಂತೂ ಹಾಕಿಕೊಂಡಿದ್ದೇವೆ. ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ:- ಟಿ.ನರಸೀಪುರ ತಾಲ್ಲೂಕಿನ ಆಲಗೂಡಿನ ಹತ್ತಿರ ಸಂಭವಿಸಿದ ಕ.ರಾ.ರ.ಸಾ.ಸಂಸ್ಥೆಯ ಬಸ್ಸಿನಿಂದಾದ ಅಪಘಾತದ ಬಗ್ಗೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 432 (2262)

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

(ಅ) ಟಿ. ನರಸೀಪುರ ತಾಲ್ಲೂಕಿನ ಆಲಗೋಡಿನ ಹತ್ತಿರ ಸಂಭವಿಸಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸಿನಿಂದುಂಟಾದ ಅಪಘಾತದಲ್ಲಿ ಸಾವುಗಳ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು?

(ಆ) ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಮತ್ತು ಪರಿಹಾರದ ಮೊತ್ತವೆಷ್ಟು?

ಶ್ರೀ ಅಜೀಜ್ ಸೇಠ್(ಸಾರಿಗೆ ಸಚಿವರು)

(ಅ) ಟಿ.ನರಸೀಪುರ ತಾಲ್ಲೂಕಿನ ಆಲಗೋಡಿನ ಹತ್ತಿರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ. ಆದರೂ ಸಹ ಇದರ ಬಗ್ಗೆ ವಿವರವಾದ ತನಿಖೆಯನ್ನು ನಡೆಸಲಾಗುತ್ತಿದೆ.

(ಆ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ:- ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ಆಕ್ಸಿಡೆಂಟ್ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆಕ್ಸಿಡೆಂಟ್ ಆಗಿದ್ದು ನಿಜ. ಅದು ಟಿ.ನರಸೀಪುರ ಎಂ.ಎಲ್.ಎ.ಯವರಿಗೂ ಸಹ ಗೊತ್ತಿದೆ. ಆ ಆಕ್ಸಿಡೆಂಟ್‌ನಲ್ಲಿ ರಂಗ ಎನ್ನತಕ್ಕಂಥ ಒಬ್ಬ ಬಡವನು ಎರಡು ಕಾಲು ಕಟ್ ಮಾಡಿಸಿಕೊಂಡು ಮಾರನೇ ದಿವಸ ತೀರಿಕೊಂಡ. ಮನುಷ್ಯನ ಪ್ರಾಣಕ್ಕೆ ಬೆಲೆ ಇಲ್ಲವೆಂದು ನನಗನಿಸುತ್ತದೆ. ನಿಮ್ಮ ದಾಖಲೆಗಳಲ್ಲಿ ಆಕ್ಸಿಡೆಂಟ್ ಬಗ್ಗೆ ಏನೂ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಅಜೀಜ್ ಸೇಠ್:- ಈ ವಿಷಯದಲ್ಲಿ ನಾನು ವಿವರಗಳನ್ನು ತರಿಸಿಕೊಂಡಿದ್ದೇನೆ. Infact even to-day morning before entering into this August House, I have made enquiries... ಮೈಸೂರು ಡಿವಿಜನ್‌ನಲ್ಲಿ ಯಾವುದೂ ಆಕ್ಸಿಡೆಂಟ್ ಆಗಿಲ್ಲವೆಂದು ಉತ್ತರ ಬಂದಿದೆ. ಮಾನ್ಯ ಸದಸ್ಯರು ಟಿ.ನರಸೀಪುರ ಎಂ.ಎಲ್.ಎ. ಅವರು ಸಹ ಇದನ್ನು ತಿಳಿದುಕೊಂಡಿದ್ದಾರೆಂದು

ಹೇಳಿದ್ದಾರೆ. I will get it re-examined. If there is any accident the KSRTC is bound to pay the componsation. ಅವನು ಬಡವ ಇರಲಿ, ಶ್ರೀಮಂತ ಇರಲಿ, ಆಕ್ಸಿಡೆಂಟ್ ಆಗಿದ್ದರೆ ಕೊಟ್ಟೇಕೊಡಬೇಕಾಗುತ್ತದೆ. ನಾನು ಉತ್ತರ ಕೊಟ್ಟಿರತಕ್ಕಂತಾದ್ದರಲ್ಲಿ no vehicle of KSRTC met with an accident near Alpur in T.Narasipur Taluk. Probably, the name of the village might be this side or that side and the off cials as you know when you ask a particular question, they will reply in a particular manner. ಆ ಕಾರಣ ಹೆಚ್ಚು ಕಡಿಮೆ ಆಗಿರುತ್ತದೆ. I did not mention something unusual. I will find out the truth from Police report also...

ವಿಷಯ:- ನೆಲಮಂಗಲ ಕ್ಷೇತ್ರದ ಪರಿಶಿಷ್ಟ ಜಾತಿ/ವರ್ಗದವರು ಹೊಂದಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 433 (1563)

ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

(ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳಿವೆ?

(ಆ) ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪರವಾನಗಿ ನೀಡಲಾಗಿದೆ (ಪೂರ್ಣ ವಿವರಕೊಡುವುದು)?

(ಇ) ಅವುಗಳಲ್ಲಿ ಶೇಕಡ 18ರಂತೆ ಮೀಸಲಾತಿಯ ಪ್ರಕಾರ ನೀಡದಿದ್ದರೆ ಅದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಟಿ.ಎನ್.ನರಸಿಂಹಮೂರ್ತಿ(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

(ಅ) 80

(ಆ) ಈ ಪೈಕಿ ಒಬ್ಬರಿಗೆ ಮಾತ್ರ ಪರಿಶಿಷ್ಟ ಜಾತಿ ಯವರಿಗೆ ಪರವಾನಗಿ ನೀಡಲಾಗಿದೆ. ವಿವರ ಈ ಕೆಳಕಂಡಂತೆ ಇದೆ.

ಶ್ರಿ ಎಲ್. ಕೃಷ್ಣಮೂರ್ತಿ,
ನಂ.86, ಲೋಹಿತ್ ನಗರ, ನೆಲಮಂಗಲ.

(ಇ) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರಿಗೆ ಆಧ್ಯತೆ ನೀಡಲು ಸರ್ಕಾರವು ಈಗಾಗಲೇ ಸಂಬಂಧಪಟ್ಟವರಿಗೆ ಸೂಚನೆ ನೀಡಿದೆ, ಆದರೂ ಈ ವಿಷಯದಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದಿರುವುದು ಮನಗಂಡು ನ್ಯಾಯಬೆಲೆ ಅಂಗಡಿಗಳನ್ನು ನೀಡುವಾಗ ಮೊದಲ ಆಧ್ಯತೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ನೀಡುವಂತೆ ಹಾಗೂ ಈ ವರ್ಗದವರಿಗೆ ಕನಿಷ್ಠ ಶೇಕಡ 20 ರಷ್ಟು ಪ್ರಾತಿನಿಧ್ಯ ನೀಡಲು ಸರ್ಕಾರ ಆದೇಶ ಹೊರಡಿಸಿದೆ.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳು ಇವೆ, ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪರವಾನಿಗೆ ನೀಡಲಾಗಿದೆ (ಪೂರ್ಣ ವಿವರ ಕೊಡುವುದು) ಅಂತ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ನ್ಯಾಯಬೆಲೆ ಅಂಗಡಿಗಳು 80 ಇವೆ ಎಂದು ಹೇಳಿದ್ದಾರೆ. ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡಲಾಗಿದೆ ಎನ್ನುವುದಕ್ಕೆ ಒಬ್ಬರಿಗೆ ಎಂದು ಹೇಳಿದ್ದಾರೆ; ಆದರೆ ಎಷ್ಟು ಅಪ್ಲಿಕೇಷನ್ನು ಬಂದಿದೆ ಎಂದು ಹೇಳಲಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ, ಈ